**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಸಿ.ಸಿ.ನಂಃ 985/2024**

**ಪಿರ್ಯಾದುದಾರರು ಃ** ಸಿದ್ದೇಗೌಡ ಬಿನ್ ಲೇಟ್ ರಾಚೇಗೌಡ 68 ವರ್ಷ

ವಾಸಃ ಮಲ್ಲುಪುರ ಗ್ರಾಮ, ಬಿಳಿಗೆರೆ ಹೋಬಳಿ , ನಂಜನಗೂಡು ತಾ.

**ವಿರುದ್ಧ**

**ಆರೋಪಿ ಃ** ಆರ್ ಮಧು, ಬಿನ್ ರಘು 36 ವರ್ಷ

ವಾಸಃ ಅಳಗಂಚಿಪುರ ಗ್ರಾಮ, ಬಿಳಿಗೆರೆ ಹೋಬಳಿ , ನಂಜನಗೂಡು ತಾ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಆರೋಪಿಯ ಹೇಳಿಕೆ**

ಪ್ರಶ್ನೆ-1ಃ ಪಿರ್ಯಾದುದಾರರು ಈ ಪ್ರಕರಣದಲ್ಲಿ ತಮ್ಮ ಸ್ವಪ್ರಮಾಣೀಕೃತ ಹೇಳಿಕೆಯ ಭಾಗವಾಗಿ ಸಲ್ಲಿಸಿರುವ ಪ್ರಮಾಣಪತ್ರವನ್ನು ಓದಿ/ಸಿ ತಿಳಿದು ಕೊಂಡಿದ್ದೀರಾ ?

ಉತ್ತರಃ

ಪ್ರಶ್ನೆ-2ಃ ಪಿರ್ಯಾದುದಾರರಾದ ಸಿದ್ದೇಗೌಡ ರವರು ತಮ್ಮ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು ದೂರುದಾರರರಿಂದ ರೂ.3,70,000/-ಗಳ ಸಾಲವಾಗಿ ಪಡೆದಿದ್ದು, ಸದರಿ ಮೊಬಲಗನ್ನು ಪಾವತಿ ಮಾಡಲು ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ನಂಜನಗೂಡು ಶಾಖೆಗೆ ಸೇರಿದ ಚೆಕ್ ನಂ.570712 ಕ್ಕೆ ರೂ.3,70,000/- ಗಳನ್ನು ದಿನಾಂಕಃ 07.08.2024 ಎಂದು ನಮೂದಿಸಿ ಪಿರ್ಯಾದುದಾರರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿದ್ದಾರೆ. ಈ ಬಗ್ಗೆ ನೀವೇನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ-3ಃ ಪಿರ್ಯಾದುದಾರರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು ನೀಡಿದ್ದ ಚೆಕ್ಕನ್ನು ದೂರುದಾರರ ಖಾತೆಯಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್, ಅಳಗಂಚಿ ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ "Drawers signature differs" ಎಂಬ ಹಿಂಬರಹದೊಂದಿಗೆ

ತಾವು ನೀಡಿದ ಚೆಕ್ಕು ದಿಃ09.08.2024 ರಂದು ಅಮಾನ್ಯಗೊಂಡಿರುತ್ತದೆ ಎಂದು ಸಾಕ್ಷ್ಯ ನುಡಿದಿದ್ದಾರೆ. ಈ ಬಗ್ಗೆ ನೀವೇನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ-4ಃ ಪಿರ್ಯಾದುದಾರರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ಚೆಕ್ಕು ನಗದಾಗದೆ ಹಿಂತಿರುಗಿ ಬಂದ ನಂತರ ಅವರಿ ವಕೀಲರ ಮೂಲಕ ದಿಃ 23.08.2024 ರಂದು ನಿಮಗೆ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಜಾರಿಯಾದರು ಕೂಡ ತಾವು ಚೆಕ್ ನಲ್ಲಿ ನಮೂದಿಸಿರುವ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದಾರೆ. ಈ ಬಗ್ಗೆ ನೀವೇನು ಹೇಳುತ್ತೀರಾ?

ಉತ್ತರ ಃ

ಪ್ರಶ್ನೆ-5 ಃ ನಿಮ್ಮ ಪರವಾಗಿ ಏನಾದರೂ ಸಾಕ್ಷಿ ವಿಚಾರಣೆ ಇದೆಯಾ ?

ಉತ್ತರಃ

ಪ್ರಶ್ನೆಃ 6 ಈ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯೊ?
ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ದಿನಾಂಕ 09.10.2025 ರಂದು ಓದಿ ತಿಳಿಸಿ ಕೇಳಿದಾಗ ಆರೋಪಿ ಅವುಗಳನ್ನು ತಿಳಿದುಕೊಂಡು ಉತ್ತರಿಸಿದ್ದು, ಅಂತಹ ಉತ್ತರಗಳನ್ನು ಪ್ರತಿ ಪ್ರಶ್ನೆಗಳನ್ನು ಕನ್ನಡದಲ್ಲಿಯೇ ನಮೂದಿಸಿ ಈ ಮೂಲಕ ದೃಢೀಕರಿಸಿದೆ.)

1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು